MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - TUESDAY 24-1-2023

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

**ಅಕ್ಕಿ ಗೋಧಿ ಮೇಲೆ ರಫ್ತು ನಿಷೇಧ ಹಿಂತೆಗೆತ ಸಧ್ಯಕ್ಕಿಲ್ಲ**

ದೇಶೀ ಮಾರುಕಟ್ಟೆಯಲ್ಲಿ ಅಕ್ಕಿ, ಗೋಧಿ ಹಾಗೂ ಅವುಗಳ ಉತ್ಪಾದನೆಗಳು ಸಾಕಷ್ಟು ಲಭ್ಯವಾಗಲು ಅಕ್ಕಿ ಹಾಗೂ ಗೋಧಿ ಮೇಲಿರುವ ರಫ್ತು ಹಿಂತೆಗೆತ ಸಧ್ಯಕ್ಕಿಲ್ಲವೆನ್ನಲಾಗಿದೆ. ರಫ್ತು ನಿಷೇಧ ಮುಂದುವರಿದಿದ್ದು, ದೇಶೀ ಮಾರುಕಟ್ಟೆಯಲ್ಲಿ ಸಾಕಷ್ಟು ಲಭ್ಯವಾಗುವ ಖಾತ್ರಿಯಾದಲ್ಲಿ ಮುಂದೆ ನಿರ್ಧರಿತವಾಗಬಹುದು.

**ಅಮೇರಿಕಾ ಸೋಯಾಬೀನ್ ಬೆಳೆ ಹಿನ್ನಡೆ ಬ್ರೆಜಿಲ್‌ನಲ್ಲಿ ಉತ್ಪಾದನೆ ಹೆಚ್ಚಳ**

ಸೋಯಾಬೀನ್ ಉತ್ಪಾದನೆ ಅಮೇರಿಕಾದಲ್ಲಿ ಇಳಿಕೆಯಾಗಲಿದೆಯೆನ್ನಲಾಗಿದ್ದು, ಬ್ರೆಜಿಲ್‌ನಲ್ಲಿ ನಾಟಿ ಪ್ರದೇಶ ಹೆಚ್ಚಳದಿಂದ ಅಲ್ಲಿನ ಉತ್ಪಾದನೆ ಹೆಚ್ಚಳವಾಗಲಿದೆಯೆನ್ನಲಾಗಿದೆ.

**ಏಲಕ್ಕಿ ಉತ್ಪಾದನೆ ಕುಸಿತ**

ಏಲಕ್ಕಿ ಉತ್ಪಾದನೆ ತೀವ್ರ ಕುಸಿತವಾಗಿದೆಯೆನ್ನಲಾಗಿದೆ. ಹವಾಮಾನ ವೈಪರೀತ್ಯದಿಂದ ಬೆಳೆಯುವ ಪ್ರದೇಶಗಳಲ್ಲಿ ಗಿಡಗಳಿಗೆ ರೋಗಬಾಧೆಯಿಂದ ಗಿಡಗಳು ನಾಶವಾಗಿ ಉತ್ಪಾದನೆ ತೀವ್ರ ಇಳಿಕೆಯಾಗಿದೆಯೆನ್ನಲಾಗಿದೆ. ದರವೂ ತೀವ್ರ ಕುಸಿತವಾಗಿರುವುದರಿಂದ ರೈತರು ತೀವ್ರ ಸಂಕಷ್ಟಕ್ಕೊಳಗಾಗಿದ್ದಾರೆನ್ನಲಾಗಿದೆ. ಹಿಂದಿನ ದಾಸ್ತಾನು ಮಟ್ಟ ಇಳಿಕೆಯಾಗುವ ಗುಣಮಟ್ಟದ ಏಲಕ್ಕಿ ಲಭ್ಯತೆ ಪ್ರಮಾಣ ಇಳಿಕೆಯಾಗುವ ಸಾಧ್ಯತೆಯಿದೆ. ಮುಂದಿನ ದಿನಗಳಲ್ಲಿ ದರ ಹೆಚ್ಚಳವಾಗುವ ಸಾಧ್ಯತೆಯಿದೆ.